1. ಕಾವೇರಿ ನೀರಿನ ವಿಚಾರದಲ್ಲಿ ಸರ್ಕಾರದ ನಿಲುವಿನ ಬಗ್ಗೆ ಸ್ಪಷ್ಟನೆ ಕೋರಿಕೆ

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ): ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ವಿಚಾರದಲ್ಲಿ ಸರ್ಕಾರದ ನಿಲುವೇನು ಎಂಬುದನ್ನು ಸ್ಪಷ್ಟಪಡಿಸಬೇಕೆಂದು ನಾವು ನಿನ್ನೆಯೇ ಹೇಳಿದ್ದೇವೆ. ಯಾವುದೇ ಕಾರಣಕ್ಕೂ ಕಾವೇರಿ ನೀರನ್ನು ಬಿಡಬಾರದೆಂದು ನಿನ್ನೆಯೇ ನಾವು ಹೇಳಿದ್ದೇವೆ. ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕೆಂದು ನಾವು ನಿನ್ನೆಯೇ ಒತ್ತಾಯ ಮಾಡಿದ್ದೇವೆ. ಆ ಭಾಗದ ರೈತರು ಬಹಳ ಆತಂಕಕ್ಕೆ ಒಳಗಾಗಿದ್ದಾರೆ. ದಯಮಾಡಿ ಯಾವುದೇ ಕಾರಣಕ್ಕೂ ಕಾವೇರಿ ನೀರನ್ನು ಬಿಡಬಾರದು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಸಿ.ಎಸ್. ಪುಟ್ಟರಾಜು ಸೇರಿದಂತೆ ಜೆ.ಡಿ.(ಎಸ್) ಹಾಗೂ ಭಾರತೀಯ ಕಾಂಗ್ರೆಸ್ ಪಕ್ಷದ ಬಹುತೇಕ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಮೊದಲು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಬೇಕು. ಕಾವೇರಿ ನದಿ ಹರಿಯುವ ಆ ಭಾಗದ ಜನರುಗಳೆಲ್ಲರೂ ಈಗಾಗಲೇ ಬಹಳ ಆತಂಕಕ್ಕೆ ಒಳಗಾಗಿದ್ದಾರೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸೋಣ

ಶ್ರೀ ಬಂಡೆಪ್ಪ ಕಾಶೆಂಪೂರ್: ದಯವಿಟ್ಟು ಈಗಲೇ ಮಾನ್ಯ ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆಸಬೇಕು. ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ವಿಚಾರದ ಬಗ್ಗೆ ಸದನದಲ್ಲಿ ಸ್ಪಷ್ಟೀಕರಣ ಕೊಡಬೇಕು ಮತ್ತು ಆ ಭಾಗದ ರೈತರ ಹಿತವನ್ನು ಕಾಪಾಡಬೇಕು.

(ಸದನದ ಬಾವಿಯಿಂದಲೇ ಕೆಲವು ಸದಸ್ಯರುಗಳು ಮಾತನಾಡಿರುತ್ತಾರೆ)

ಶ್ರೀ ಬಸವರಾಜ ಬೊಮ್ಮಾಯಿ (ಬೃಹತ್ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಕಾವೇರಿ ವಿಚಾರದಲ್ಲಿ ಈಗಾಗಲೇ ಬೆಳಿಗ್ಗೆ ಎಲ್ಲಾ floor leaders ಜೊತೆಗೆ ಒಂದು ಸುತ್ತಿನ ಸುದೀರ್ಘವಾದಂಥ ಮಾತುಕತೆಯಾಗಿದೆ. ಸುಪ್ರೀಂಕೋರ್ಟಿನ ಆದೇಶದ ಹಿನ್ನೆಲೆಯಲ್ಲಿ ಆಗುತ್ತಿರುವಂಥ ಸಂದಿಗ್ಧ ಪರಿಸ್ಥಿತಿ ಮತ್ತು ಇದರಿಂದಾಗುವ ಸಾಧಕ ಭಾದಕಗಳ ಬಗ್ಗೆ ಕೂಡ ಚರ್ಚೆಯಾಗಿದೆ. ಆದುದರಿಂದ ಅಧಿಕೃತವಾಗಿ ಮಾನ್ಯ ಮುಖ್ಯಮಂತ್ರಿಗಳು ಈ

ಸಭೆಗೆ ಬಂದು ಈ ಬಗ್ಗೆ ಹೇಳಿಕೆಯನ್ನು ಕೊಡಲಿದ್ದಾರೆ. ಈಗಾಗಲೇ ಈ ವಿಚಾರದಲ್ಲಿ ಯಾವುದೇ ರೀತಿಯ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅದಕ್ಕೆ ಬದ್ಧರಾಗಿ ಕೆಲವು ವಿಚಾರಗಳನ್ನು ಈ ಸದನದಲ್ಲಿ ಮಂಡಿಸಲಿದ್ದಾರೆ. ಅದಕ್ಕಾಗಿ ನನ್ನ ಎಲ್ಲಾ ಶಾಸಕ ಮಿತ್ರರಿಗೆ ಹೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ಇನ್ನೇನು ಕೆಲವೇ ನಿಮಿಷಗಳಲ್ಲಿ ಸದನಕ್ಕೆ ಬಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ಆದುದರಿಂದ ಧರಣಿಯಲ್ಲಿರುವ ಶಾಸಕರೆಲ್ಲರೂ ಬಾವಿಯಿಂದ ಹೊರಗೆ ಬಂದು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಜನಗಳಿಗೆ ಕುಡಿಯುವುದಕ್ಕೂ ನೀರಿಲ್ಲ, ದನಕರುಗಳಿಗೆ ನೀರಿಲ್ಲ, ಇಂಥ ಪರಿಸ್ಥಿತಿ ಇರುವಾಗ ಕಾವೇರಿ ನೀರನ್ನು ಬಿಡಬಾರದೆಂದು ಬಹಳ ಸ್ಪಷ್ಟವಾಗಿ ನಾವು ನಿನ್ನೆಯೇ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು. ಅವರು ಇವತ್ತು ದಯಮಾಡಿ ಹೇಳಿಕೆ ಕೊಡಬೇಕು. ಹೇಳಿಕೆ ಕೊಟ್ಟು ಯಾವುದೇ ಕಾರಣಕ್ಕೂ ನೀರು ಬಿಡುವುದಿಲ್ಲವೆಂದು ಅವರು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನ ಬಿ.ಎ.ಸಿ. ಮೀಟಿಂಗ್‌ನಲ್ಲಿದ್ದಾರೆ. ಇನ್ನು ಕೆಲವೇ ನಿಮಿಷಗಳಲ್ಲಿ ಅವರು ಇಲ್ಲಿಗೆ ಬಂದು ಕಾವೇರಿ ವಿಚಾರದಲ್ಲಿ ಸರ್ಕಾರದ ಹೇಳಿಕೆಯನ್ನು ಕೊಡಲಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ನೀರಾವರಿ ಮಂತ್ರಿಗಳೆ, ನಿನ್ನೆಯೇ ಹೇಳಿಕೆಯನ್ನು ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ನಿನ್ನೆ ಈ ವಿಚಾರದ ಮೇಲೆ ಚರ್ಚೆಯಾದ ಮೇಲೆ ಇನ್ನು ಅರ್ಧ ಗಂಟೆಯಲ್ಲಿ ಹೇಳಿಕೆಯನ್ನು ಕೊಡುತ್ತೇನೆಂದು ನಿನ್ನೆ ಹೇಳಿದ್ದರು. ಇವತ್ತು ಈಗಾಗಲೇ ಅರ್ಧ ದಿನ ಮುಗಿದುಹೋಯಿತು. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನಿನ್ನೆ ಕೂಡ ಈ ಸದನ ಮುಗಿದ

ನಂತರ ಎಲ್ಲಾ ವಿರೋಧ ಪಕ್ಷದ ನಾಯಕರಾಗಿ ಎಲ್ಲಾ ಪ್ರಮುಖರ ಜೊತೆ ಈ ವಿಚಾರದ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಇವತ್ತು ಬೆಳಿಗ್ಗೆ ಕೂಡ ಚರ್ಚೆಯನ್ನು ಮಾಡಿದ್ದೇವೆ. ಅಲ್ಲಿಯೇ ಸೀನಿಯರ್ ಕೌನ್ಸಿಲ್ ಜೊತೆಯಲ್ಲಿ ಕೂಡ ಚರ್ಚೆ ಮಾಡಿರುವ ಆಧಾರದ ಹಿನ್ನೆಲೆಯಲ್ಲಿ ಇವತ್ತು ಬೆಳಿಗ್ಗೆ ಕೂಡ ಚರ್ಚೆಯಾಗಿದೆ. ಇವತ್ತು ಒಂದು ವ್ಯವಸ್ಥಿತ ರೀತಿಯಲ್ಲಿ ಈ ಬಗ್ಗೆ ಸುದೀರ್ಘವಾದ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕೊಡುವವರಿದ್ದಾರೆ. ಇನ್ನು ಕೆಲವೇ ನಿಮಿಷಗಳಲ್ಲಿ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುವವರಿದ್ದಾರೆ. ಈಗಾಗಲೇ ಅವರಿಗೆ ಹೇಳಿಕಳುಹಿಸಿದ್ದೇವೆ. ಅವರು ಇನ್ನೇನು ಸದನಕ್ಕೆ ಬರುತ್ತಾರೆ. ಅಲ್ಲಿಯವರೆವಿಗೆ ಧರಣಿಯಲ್ಲಿರುವ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಆಸನಕ್ಕೆ ಹೋಗಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಂದು ಹೇಳಿಕೆ ಕೊಟ್ಟ ಮೇಲೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶವಿದ್ದೇ ಇರುತ್ತದೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಿನ್ನೆಯೇ ಕಾವೇರಿ ವಿಚಾರದಲ್ಲಿ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಹೇಳಿದ್ದೇವೆ. ಅದಕ್ಕೆ ಅವರು ಹೇಳಿಕೆಯನ್ನು ಕೊಡುವುದಾಗಿ ಕೂಡ ಹೇಳಿದ್ದಾರೆ. ಆದರೆ ಇದುವರೆಗೆ ಹೇಳಿಕೆ ಕೊಟ್ಟಿಲ್ಲ.

(ಧರಣಿ ನಿರತ ಸದಸ್ಯರುಗಳು ಬಾವಿಯಿಂದ ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮ ಕಾಳಜಿಯನ್ನು ಅರ್ಥ ಮಾಡಿಕೊಳ್ಳುತ್ತೇವೆ. ರೈತರ ಹಿತರಕ್ಷಣೆ ಬಗ್ಗೆ ನಿಮಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನಮ್ಮ ಸರ್ಕಾರಕ್ಕೆ ಇದೆ. ಕಾವೇರಿ ವಿಚಾರ ಇವತ್ತೇನೂ ಹೊಸದಲ್ಲ. ಹಿಂದೆಲ್ಲಾ ಸುಪ್ರೀಂಕೋರ್ಟ್ ಆದೇಶವಾದಾಗ ಆಗೆಲ್ಲಾ ಯಾವ ಯಾವ ಸರ್ಕಾರಗಳು ಯಾವ ಯಾವ ನಿರ್ಣಯಗಳನ್ನು ತೆಗೆದುಕೊಂಡಿದೆ ಎಂಬುದು ನಮಗೂ ಗೊತ್ತು ಮತ್ತು ನಿಮಗೂ ಗೊತ್ತು. ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಒಟ್ಟಿಗೆ ಈ ವಿಚಾರದಲ್ಲಿ ತೀರ್ಮಾನವನ್ನು ಮಾಡಬೇಕಿದೆ. ಸರ್ಕಾರ ಮತ್ತು ವಿರೋಧ ಪಕ್ಷ ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇಬ್ಬರೂ ಸೇರಿ ಕೈಗೊಳ್ಳಬೇಕಾದ ನಿರ್ಣಯವಾಗಿರುತ್ತದೆ. ಆದುದರಿಂದ ಸುಪ್ರೀಂಕೋರ್ಟಿನ ಆದೇಶದ

ಪರಿಣಾಮಗಳು ಹಿಂದೆಲ್ಲಾ ಏನಾಗಿದೆ ಎಂಬುದನ್ನೂ ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಎಲ್ಲಾ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸುಧೀರ್ಘವಾದ ಹೇಳಿಕೆಯಲ್ಲಿ ಹೇಳಲಿದ್ದಾರೆ. ಆದುದರಿಂದ ಮಾನ್ಯ ಸದಸ್ಯರುಗಳೆಲ್ಲರೂ ಸದನದ ಬಾವಿಯಿಂದ ಹೊರಬಂದು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸದನದಲ್ಲಿ ಬೇರೆ ಕಲಾಪಗಳು ನಡೆಯಲು ಅವಕಾಶ ಮಾಡಿ ಕೊಡಿ. ಮುಖ್ಯಮಂತ್ರಿಗಳು ಬಂದ ತಕ್ಷಣ ಹೇಳಿಕೆಯನ್ನು ಕೊಡುತ್ತಾರೆ.

ಅಧ್ಯಕ್ಷರು: ಮುಖ್ಯಮಂತ್ರಿಗಳು ಬರಲಿ, ಧರಣಿ ನಿರತರಾಗಿರುವ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹೋಗಿ. ಮುಖ್ಯಮಂತ್ರಿಗಳು ಬರಲಿ, ಅವರ ಸ್ಟೇಟ್‌ಮೆಂಟ್ ಕೇಳೋಣ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕರೆಸಿ. ಅವರು ಮೊದಲು ಹೇಳಿಕೆಯನ್ನು ಕೊಟ್ಟುಬಿಡಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ನೀರಾವರಿ ಮಂತ್ರಿಗಳೆ, ಈಗಾಗಲೇ ನೀರನ್ನು ಬಿಟ್ಟಿದ್ದೀರೋ ಅಥವಾ ಇಲ್ಲವೋ. ನಮಗೆ ಬಂದಿರುವ ಮಾಹಿತಿ ಪ್ರಕಾರ ಈಗಾಗಲೇ ನೀರು ಬಿಟ್ಟಿದ್ದಾರೆಂದು ಗೊತ್ತಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಈ ವಿಚಾರದಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮಿಂದ ಯಾವ ಆದೇಶವು ಕೂಡ ಹೋಗಿಲ್ಲ. ನೀವು ಊಹಾಪೋಹಗಳಿಗೆ ಕಿವಿಗೊಡಬೇಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಸರ್ಕಾರ ಇಷ್ಟೊಂದು ಬೇಜವಾಬ್ದಾರಿಯಿಂದ ಇರಬಾರದು. ನಿನ್ನೆಯೇ ಅವರು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು. ಇವತ್ತು ಮಧ್ಯಾಹ್ನದವರೆಗೂ ನಾವು ಕಾಯುತ್ತಿದ್ದೇವೆ. ಕಾವೇರಿ ನೀರಿನ ವಿಚಾರದಲ್ಲಿ ಸರ್ಕಾರದ ಸ್ಪಷ್ಟವಾದ ನಿಲುವೇನು ಎಂಬುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ವಿಶೇಷವಾಗಿ ಕಾವೇರಿ ಬೇಸಿನ್‌ನಲ್ಲಿರುವ ಜನರು ಅಲ್ಲಿ ಚಳುವಳಿಯನ್ನು ಮಾಡುತ್ತಿದ್ದಾರೆ. ಕೆ.ಆರ್.ಎಸ್. ಹತ್ತಿರ ಹೋಗಿ ಅಲ್ಲಿ ಮುತ್ತಿಗೆ ಹಾಕಲು ಕಾಯುತ್ತಿದ್ದಾರೆ.

ಅಧ್ಯಕ್ಷರು: ಮುಖ್ಯ ಮಂತ್ರಿಗಳನ್ನು ಕರೆಸಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನಾವೆಲ್ಲಾ ಒಂದಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಕೆಲವೇ ನಿಮಿಷಗಳಲ್ಲಿ ಬಂದು ಹೇಳುತ್ತಾರೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಈಗ ಮಾನ್ಯ ಮಾನ್ಯಮುಖ್ಯಮಂತ್ರಿಗಳು ಬಂದು ಹೇಳಿಕೆ ಕೊಡಲಿ. ಈ ಕತೆ ಎಲ್ಲಾ ಏಕೆ?

ಶ್ರೀ ಬಸವರಾಜ ಬೊಮ್ಮಾಯಿ: ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡುತ್ತಾರೆ. ದಯವಿಟ್ಟು ಸಹಕಾರ ಮಾಡಿ. ನಿನ್ನೆಯೆಲ್ಲಾ ಚೆನ್ನಾಗಿ ಇದ್ದಿರಿ. ಈಗ ಏಕೆ ಈ ರೀತಿ ಇದ್ದೀರಿ?

(ಗೊಂದಲ)

ಅಧ್ಯಕ್ಷರು: ಮುಖ್ಯ ಸಚೇತಕರೇ ಮುಖ್ಯಮಂತ್ರಿಗಳನ್ನು ಬರುವುದಕ್ಕೆ ಹೇಳಿ. ಎಲ್ಲರೂ ಸದನದ ಬಾವಿಯಲ್ಲಿ ನಿಂತಿದ್ದಾರೆ, ಅವರನ್ನು ಕರೆಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇಲ್ಲಿ ಧರಣಿ ನಡೆಯುತ್ತಿದೆ. ನೀವು ಇಲ್ಲಿ ಕುಳಿತಿರುವುದು, ಅವರು ಸದನಕ್ಕೆ ಬರದಿರುವುದು, ಇದು ಚೆನ್ನಾಗಿ ಕಾಣಿಸುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಈ ರೀತಿಯಾದರೆ ಹೇಗೆ? ಈ ರೀತಿಯಾದರೆ ಇದು ನಿಮಗೆ ಅಗೌರವ. This is not correct.

ಅಧ್ಯಕ್ಷರು: ಮುಖ್ಯಮಂತ್ರಿಗಳನ್ನು ಕರೆಸಿ.

ಶ್ರೀ ಡಿ.ಕೆ. ಶಿವಕುಮಾರ್: ಈ ಕಾವೇರಿ ನೀರಿನ ವಿಚಾರದಲ್ಲಿ ನೀವು ಇಷ್ಟು ಅಸಹಾಯಕರಾದರೆ ಹೇಗೆ? ಸರ್ಕಾರ ಇಂತಹ ಒಂದು ವಿಚಾರದಲ್ಲಿ ಒಂದು ನಿಲುವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೆಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ಚಾಟಿ ಬೀಸಬೇಕು, ಹೀಗಾದರೆ ಹೇಗೆ? ನೀವು ಕಾಯುತ್ತಾ ಕುಳಿತುಕೊಳ್ಳುವುದು ಚೆನ್ನಾಗಿರುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ನಿಮ್ಮ ಕಾಲದಲ್ಲಿ ಕಾವೇರಿಯನ್ನು ರಕ್ಷಣೆ ಮಾಡುವುದಕ್ಕೆ ಆಗಲಿಲ್ಲವೆಂದರೆ ಇನ್ಯಾರು ರಕ್ಷಣೆ ಮಾಡಬೇಕು ಸ್ವಾಮಿ?

ಅಧ್ಯಕ್ಷರು: ನಮ್ಮ ನೀರು, ನೀರು ಎಂದು ಹೇಳಿ ಸರಿ ಮಾಡುತ್ತೀರಿ!

ಶ್ರೀ ಡಿ.ಕೆ. ಶಿವಕುಮಾರ್: ತಾವು ತಲಕಾವೇರಿ ಪುತ್ರರು. ನೀವೇ ಕಾವೇರಿ ರಕ್ಷಣೆ ಮಾಡಲಿಲ್ಲವೆಂದರೆ ಇನ್ಯಾರು ರಕ್ಷಣೆ ಮಾಡಬೇಕು ಸ್ವಾಮಿ? ಈ ಸರ್ಕಾರ ನೀರನ್ನು ಏನಾದರೂ ಬಿಟ್ಟರೆ ಅವತ್ತೇ ನೀವು ರಾಜೀನಾಮೆ ಕೊಡಬೇಕು. ತಾವು ತಮ್ಮ speaker ಸ್ಥಾನಕ್ಕೆ ರಾಜೀನಾಮೆ ಕೊಡಬೇಕು.

ಶ್ರೀ ಸಿದ್ದರಾಮಯ್ಯ: ನಮ್ಮ ಜೊತೆ ನೀವು ರಾಜೀನಾಮೆ ಕೊಡಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್: ನೀವು ಹೋರಾಟಕ್ಕೆ ಬರಬೇಕು, ಇನ್ನು ಮುಂದೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ರಾತ್ರೋ ರಾತ್ರಿ ನೀರು ಬಿಟ್ಟವರು ನಮ್ಮ ಸ್ನೇಹಿತರು ಇಲ್ಲಿ ಇದ್ದಾರೆ ನೋಡಿ.

ಅಧ್ಯಕ್ಷರು: ಮುಖ್ಯಮಂತ್ರಿ ಬರುವವರೆಗೂ ಬೇರೆ ವಿಷಯವನ್ನು ತೆಗೆದುಕೊಳ್ಳೋಣ. ಅವರು ವಿಧಾನ ಪರಿಷತ್ತಿನ ಬಿ.ಎ.ಸಿ ಸಮಿತಿ ಸಭೆಯಲ್ಲಿ ಇದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ಈ ರೀತಿ ಕಾಯುತ್ತಾ ಕುಳಿತುಕೊಂಡಿರುವುದು ಸರಿಯಲ್ಲ.

ಅಧ್ಯಕ್ಷರು: ಬೇರೆ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ: ಬೇರೆ ಏನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. The House is not in order.

ಅಧ್ಯಕ್ಷರು: ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸಭೆಯ ಕಲಾಪವು 3–05ಕ್ಕೆ ಮುಕ್ತಾಯಗೊಂಡು ಮತ್ತೆ ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು ಪುನಃ ಮಧ್ಯಾಹ್ನ 3-34 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು ಪೀಠವನ್ನಲಂಕರಿಸಿದರು

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಹಲವು ಸದಸ್ಯರು ಮತ್ತು ಜೆ.ಡಿ.(ಎಸ್) ಪಕ್ಷದ ಹಲವು ಸದಸ್ಯರು ಹಾಗೂ ಪಕ್ಷೇತರ ಸದಸ್ಯರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಸದನದ ಬಾವಿಯಲ್ಲಿದ್ದರು)

ಅಧ್ಯಕ್ಷರು :- ಈಗ ಮಾನ್ಯ ಮುಖ್ಯಮಂತ್ರಿಯವರು statement ಮಾಡುತ್ತಾರೆ. ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿ):- ಈಗ ನಾನು statement ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಮುಖ್ಯ ಮಂತ್ರಿಯವರು statement ಮಾಡಲಿ

ಶ್ರೀ ಸಿದ್ದರಾಮಯ್ಯ:- Statement copy ಕೊಡಲಿ

ಅಧ್ಯಕ್ಷರು:- Statement copy ಕೊಡಿಸಿ. ದಯವಿಟ್ಟು ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸದಸ್ಯರು ದಯವಿಟ್ಟು ಅವರವರ ಸ್ಥಳಗಳಿಗೆ ಹೋಗಲಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು)

2. ಕಾವೇರಿ ನೀರಿನ ವಿಚಾರದ ಬಗ್ಗೆ ಸರ್ಕಾರದಿಂದ ಹೇಳಿಕೆ

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ಕಾವೇರಿ ಜಲ ವಿವಾದ ಕುರಿತು ನಿನ್ನೆ ಮಾನ್ಯ Supreme Courtನಲ್ಲಿ ಆಜ್ಞೆಯಾಯಿತು. ಆ ಹಿನ್ನೆಲೆಯಲ್ಲಿ ನಿನ್ನೆಯೂ ಸಹ ಸದನದಲ್ಲಿ ಚರ್ಚೆಯಾಯಿತು. ಆ ಹಿನ್ನೆಲೆಯಲ್ಲಿ ನಾನು ಒಂದು ಹೇಳಿಕೆಯನ್ನು ತಮ್ಮ ಗಮನಕ್ಕೆ ಮತ್ತು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

ಕಾವೇರಿ ಜಲವಿವಾದವು ಆಗಿನ ಮದ್ರಾಸ್ ಮತ್ತು ಮೈಸೂರು Presidency/ Princely States ಮಧ್ಯೆ ಏರ್ಪಟ್ಟ 1892 ಹಾಗೂ 1924ರ ಒಪ್ಪಂದಗಳ ಹಿನ್ನೆಲೆ ಹಾಗೂ ಇತಿಹಾಸವನ್ನು ಹೊಂದಿದೆ.